## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.467/2016

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರಂಗಪ್ಪ ಅಲಿಯಾಸ್ ಮಾಜಿ ರಂಗಪ್ಪ | CW: 9 | PW: 8 |
| ತಂದೆಯ ಹೆಸರು | : | ಸಿದ್ದಪ್ಪ | | |
| ವಯಸ್ಸು | : | 70 | | |
| ವೃತ್ತಿ | : | ವ್ಯವಸಾಯ | | |
| ವಾಸಸ್ಥಳ | : | ಫಲವನಹಳ್ಳಿ | | |

ದಿನಾಂಕಃ **27.11.2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳ ಪರಿಚಯ ಇದೆ. ಚಾಸಾ 1 ರಿಂದ 8, 10 ಮತ್ತು 11 ಗೊತ್ತು. ಆರೋಪಿಗಳ ಮಧ್ಯೆ ಮತ್ತು ಚಾಸಾ 1, 4 ಮತ್ತು 5 ರವರ ನಡುವೆ ಆದ ಗಲಾಟೆಯನ್ನು ನಾನು ನೋಡಿಲ್ಲ. ವೈಯಕ್ತಿಕ ಕೆಲಸದ ಮೇರೆಗೆ ನ್ಯಾಮತಿ ಪೊಲೀಸ್ ಠಾಣೆಗೆ ಭೇಟಿ ನೀಡಿದಾಗ ಪೋಲೀಸರ ಕೋರಿಕೆಯ ಮೇರೆಗೆ 1 ದಾಖಲೆಗೆ ಸಹಿ ಮಾಡಿರುತ್ತೇನೆ. ಆದರೆ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯಲಯ ಮುಂದೆ ಇರುವ ಮು.ಮಾ 1 ಮತ್ತು 2 ನ್ನು ನಾನು ಈ ಹಿಂದೆ ಎಂದೂ ನೋಡಿರುವುದಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ನಮ್ಮೂರಿನ ಚಾಸಾ 1, 4 ಮತ್ತು 5 ರವರಿಗೂ, ಆರೋಪಿಗಳಿಗೂ ತಮ್ಮ ಜಮೀನು ಮತ್ತು ಕಣದ ನಿವೇಶನ ವಿಚಾರದಲ್ಲಿ ಆಗಾಗ್ಗೆ ಜಗಳ ಆಗುತ್ತಿದ್ದವು ಎಂದು ನಮ್ಮೂರಿನ ಹಿರಿಯವರು ಸೇರಿ ಪಂಚಾಯತಿ ಮಾಡಿ ಬಗೆಹರಿಸಿದರೂ ಪುನಃ ಜಗಳ ಆಗುತ್ತಿದ್ದವು. ದಿಃ 27.01.2016 ರಂದು ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮೂರಿನ ವಾಸಿಗಳಾದ ಚಾಸಾ 6, 7, 8 ಇವರೆಲ್ಲರೂ ಸೇರಿ ಚಾಸಾ 1 ರವರ ತಂದೆ ಮತ್ತು ಆರೋಪಿಗಳ ಮನೆ ಇರುವ ಬೀದಿಯ ಮೇಲೆ ಇರುವ ಮರದ ಕೆಳಗೆ ಕುಳಿತುಕೊಂಡು ಮಾತನಾಡುತ್ತಿರುವಾಗ ಆರೋಪಿಗಳು ಏಕಾಏಕಿ ಹನುಮಂತಪ್ಪ ಇವರ ಮನೆಯ ಮುಂದೆ ಬಂದು ಕೂಗಾಡಿ ಸೂಳೇಮಕ್ಕಳಾ, ಬೋಳೀಮಕ್ಕಳಾ, ಕಣದ ಜಾಗದಲ್ಲಿ ಮತ್ತು ಜಮೀನನ್ನು ಬಿಟ್ಟು ತೋಲಗಿ ಮಿಂಡ್ರುಗ್ ಹುಟ್ಟಿದ ಸೂಳೇಮಕ್ಕಳಾ, ನಿಮ್ ತಾಯಿನಾಡ ಅಂತಾ ಕೆಟ್ಟ ಕೆಟ್ಟದಾಗಿ ಅವಾಚ್ಯವಾಗಿ ಬೈದಾಡುತ್ತಿದ್ದಾಗ ನಾನು, ಚಾಸಾ 6 ರಿಂದ 8 ಎಲ್ಲರೂ ಸೇರಿ ಹನುಮಂತಪ್ಪನವರ ಮನೆಯ ಹತ್ತಿರ ನೋಡುತ್ತಿದ್ದಾಗ ಚಾಸಾ 1 ರವರು ಆರೋಪಿಗಳಿಗೆ ಏಕೆ ಹೀಗೆ ಕೂಗಾಡಿ ನಮಗೆ ಬೈದಾಡುತ್ತಿದ್ದೀರಿ ಎಂದು ಕೇಳಿದಾಗ 1 ನೇ ಆರೋಪಿಯು ಚಾಸಾ 1 ರವರಿಗೆ ಕೈಯಿಂದ ತಲೆಗೆ ಹೊಡೆದರು ಎಂದು, 2 ನೇ ಆರೋಪಿಯು ಮು.ಮಾ 1 ನ್ನು ಬಲಗೈನಲ್ಲಿ ಹಿಡಿದುಕೊಂಡಿದ್ದನು ಎಂದು, ಚಾಸಾ 1 ರವರು ಜನರ ಮಧ್ಯೆ ಮಾತಾನಾಡುತ್ತಾ ನಿಂತಿದ್ದಾಗ 2 ನೇ ಆರೋಪಿಯು ಮು.ಮಾ 1 ರಿಂದ ಚಾಸಾ 1 ರವರ ಮರ್ಮಾಂಗಕ್ಕೆ ಎಡಗೈ ಹಾಕಿ ಬಲಗೈಯಿಂದ ಮರ್ಮಾಂಗದ ಭಾಗದಲ್ಲಿ ಕೊಯ್ದನು ಎಂದು, ಆಗ ಚಾಸಾ 1 ರವರು ಚೀರಿಕೊಂಡಾಗ ಚಾಸಾ 4 ಮತ್ತು ಚಾಸಾ 5 ರವರು ಬಂದಾಗ ಅವರಿಗೂ ಸಹ ಅವಾಚ್ಯವಾಗಿ ಬೈದಾಡಿ 3 ನೇ ಆರೋಪಿಯು ತನ್ನ ಕೈಗಳ ಉಗುರುಗಳಿಂದ ಚಾಸಾ 5 ರವರ ಎಡಗೈ ರಟ್ಟೆಗೆ ಗೀರಿ ಕೈಕಾಲುಗಳಿಂದ ಹೊಡೆದು ಗಾಯಪಡಿಸಿದನು ಎಂದು, ಚಾಸಾ 4 ರವರಿಗೆ 4 ನೇ ಆರೋಪಿಯು ಕೈಕಾಲುಳಿಗಳಿಂದ ಹೊಡೆದನು ಎಂದು, 2 ನೇ ಆರೋಪಿಯು 1 ದೊಣ್ಣೆಯಿಂದ ಚಾಸಾ 1 ರವರ ಬಲಗಾಲಿಗೆ ಹೊಡೆಯುತ್ತಿದ್ದಾಗ ಕೂಡಲೇ ನಾನು ಮತ್ತು ಚಾಸಾ 6 ರಿಂದ 8 ರವರು ಸೇರಿ ಜಗಳವನ್ನು ಬಿಡಿಸಿದೆವು ಎಂದು, ಚಾಸಾ 6 ರವರು 2 ನೇ ಆರೋಪಿಯ

ಕೈಯಲ್ಲಿದ್ದ ಮು.ಮಾ 1 ಮತ್ತು 2 ನ್ನು ಕಸಿದುಕೊಂಡು ಒಂದು ಕಡೆ ಬಿಸಾಕಿದನು ಎಂದು, ಜಗಳವನ್ನು ಬಿಡಿಸಿದರೂ ಸಹ ಆರೋಪಿಗಳು ಹನುಮಂತಪ್ಪನವರ ಕಡೆಯವರನ್ನು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿದರು ಎಂದು, ಗಾಯಗೊಂಡಿದ್ದ ಚಾಸಾ 1 ಮತ್ತು 4 ರವರನ್ನು ಚಾಸಾ 10, 11 ರವರು ಸೇರಿ ಚಾಸಾ 1 ರವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು, ದಿಃ 20.02.2016 ರಂದು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ರವರು ಈ ಕೇಸಿನ ವಿಚಾರಣೆಗೆ ನಮ್ಮ ಊರಿಗೆ ಬಂದಾಗ ಮಾನ್ಯ ಘನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ಹೇಳುವುದಾಗಿ ಇರುವ ಬಾಂಡ್ ಪತ್ರಕ್ಕೆ ಸಹಿ ಮಾಡಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಆರೋಪಿಗಳು ನಮ್ಮ ಊರಿನವರೇ ಅಗಿದ್ದು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.